**<u>ದಿನಾಂಕಃ12.12.2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಲ್.ಎ., ವಕೀಲರಿಂದಃ-</u>**

ನನ್ನ ತಂದೆ ಕೆಇಬಿಯಲ್ಲಿ ಖಾಯಂ ನೌಕರರಾಗಿದ್ದರು ಎಂದರೆ ಸರಿ. 2015ರಲ್ಲಿ ನನ್ನ ತಂದೆ ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಂದೆಗೆ ನಾನೂ ಸೇರಿ ಒಟ್ಟು 7 ಜನ ಮಕ್ಕಳು. ನನ್ನ ತಂದೆ ತೀರಿಕೊಂಡ ನಂತರ ನನ್ನ ಸಹೋದರ ಸಹೋದರಿಯರು ಎಲ್ಲಾ ಭಾಗಿಯಾಗಿದ್ದರು ಎಂದರೆ ಸರಿ. ತಂದೆ ತೀರಿಕೊಳ್ಳುವ ಮೊದಲು ನಾನು, ನನ್ನ ಸಹೋದರ, ಸಹೋದರಿಯರು ಮತ್ತು ನನ್ನ ತಂದೆಯ ನಡುವೆ ಒಳ್ಳೆಯ ಬಾಂಧವ್ಯ ಇತ್ತು ಎಂದರೆ ಸರಿ. ನನ್ನ ಮದುಗೆ 1997ರಲ್ಲಿ ಆಗಿದೆ. ನನ್ನ ಸಹೋದರಿಯರು ಮತ್ತು ನನ್ನ ಸಹೋದರನ ಮದುವೆಗಳು ಆಗಿವೆ ಎಂದರೆ ಸರಿ. ಮದುವೆಯಾದ ನಂತರ ನಾನು ನನ್ನ ಸಹೋದರಿಯರು ಮತ್ತು ನನ್ನ ಸಹೋದರ ಪ್ರತ್ಯೇಕ ಪ್ರತ್ಯೇಕವಾಗಿ ವಾಸವಿದ್ದೇವೆ ಎಂದರೆ ಸರಿ. ದಾವೆ ಹೂಡುವ ಸಮಯದಲ್ಲಿ ನಾನು ಮತ್ತು ಇನ್ನುಳಿದ ವಾದಿಗಳು ಸೇರಿ ಮಾತುಕತೆ ಮಾಡಿ ಒಂದು ನಿರ್ಧಾರಕ್ಕೆ ಬಂದು ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. ದಾವಾ ಹೂಡುವ ಕಾಲಕ್ಕೆ ದಾವಾ ಆಸ್ತಿಗಳು 4ನೇ ಪ್ರತಿವಾದಿಯ ಹೆಸರಿಗೆ ಖಾತೆ ಇದ್ದವು ಎಂದರೆ ಸಾಕ್ಷಿಯು ದಾವೆ ಹೂಡುವ ಕಾಲಕ್ಕೆ ದಾವಾ ಆಸ್ತಿಗಳು ನನ್ನ ಅಕ್ಕ ಶಿವಲಿಂಗಮ್ಮರವರ ಹೆಸರಿಗೆ ಖಾತೆ ಇದ್ದು ದಾವೆ ಹೂಡಿದ ನಂತರ ನನ್ನ ಅಕ್ಕ ಶಿವಲಿಂಗಮ್ಮ ಆಕೆಯ ಮಗ 4ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾಯಿಸಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. 4ನೇ ಪ್ರತಿವಾದಿಯ ಹೆಸರಿಗೆ ಖಾತೆಯು ತಮ್ಮ ತಾಯಿ ಮತ್ತು ಅವರ ಕುಟುಂಬದ ಮಧ್ಯೆ ವಿಭಾಗ ಪತ್ರ ಆಗಿ ಆತನ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿಯು ದಾವೆ ಹೂಡಿದ ನಂತರ ಖಾತೆ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. 4ನೇ ಪ್ರತಿವಾದಿ ಹೆಸರಿಗೆ ಖಾತೆ ಆಗುವ ಮೊದಲು ದಾವಾ ಆಸ್ತಿಗಳು ನನ್ನ ಅಕ್ಕ 1ನೇ ಪ್ರತಿವಾದಿ ಶಿವಲಿಂಗಮ್ಮರವರ ಹೆಸರಿಗೆ ಖಾತೆ ಇದ್ದವು

ಎಂದರೆ ಸರಿ. 1996-97ನೇ ಸಾಲಿನಿಂದಲೂ ದಾವಾ ಐಟಂ ಸ್ವತ್ತುಗಳ ಪೈಕಿ 3ನೇ ಐಟಂ ಸ್ವತನ್ನು ಹೊರತುಪಡಿಸಿ ಇನ್ನುಳಿದ ಸ್ವತ್ತುಗಳು ನನ್ನ ಅಕ್ಕ ಶಿವಲಿಂಗಮ್ಮರವರ ಹೆಸಗೆ ಖಾತೆ ಇದ್ದವು ಎಂದರೆ ಸರಿ. ಸಾಕ್ಷಿ ಮುಂದುವರಿದು ನಮಗೆ ಗೊತ್ತಿಲ್ಲದ ಹಾಗೆ ಖಾತೆ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. 5ನೇ ವಾದಿ ನನ್ನ ಅಕ್ಕ ಜಯಮ್ಮರವರ ಹೆಸರಿಗೆ ದಾವಾ ಐಟಂ ನಂಬರ್ 3ನೇ ಸ್ವತ್ತು 1996-978ನೇ ಸಾಲಿನಲ್ಲಿ ಖಾತೆ ಆಗಿದೆ ಎಂದರೆ ಸರಿ. ಸದರಿ ಅಸ್ತಿಯು 5ನೇ ವಾದಿಗೆ ಹೇಗೆ ಬಂದಿದ ಎಂದು ಕೇಳಲಾಗಿ ನನ್ನ ತಂದೆಯೇ ಅವರ ಹೆಸರಿಗೆ ಖಾತೆ ಮಾಡಿಸಿಕೊಟ್ಟಿದ್ದಾರೆ ಎನ್ನುತ್ತಾರೆ. ಹಾಗೆಯೇ ನನ್ನ ತಂದೆ ದಾವಾ ಐಟಂ ನಂಬರ್ 3ರ ಸ್ವತ್ತನ್ನು ಹೊರತುಪಡಿಸಿ ಇನ್ನುಳಿದ ದಾವಾ ಸ್ವತ್ತುಗಳನ್ನು 1ನೇ ಪ್ರತಿವಾದಿ ನನ್ನ ಅಕ್ಕ ಶಿವಲಿಂಗಮ್ಮರವರ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮಗೆ ಕೊಡದೇ ಎಲ್ಲಾ ಆಸ್ತಿಯನ್ನು ಅವರಿಗೇ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. 1996-97ರಲ್ಲೇ ದಾವಾ ಸ್ವತ್ತುಗಳು 1ನೇ ಪ್ರತಿವಾದಿ ಮತ್ತು 5ನೇ ವಾದಿಗೆ ಖಾತೆ ಆಗಿದ್ದು, ಸದರಿ ಖಾತೆಯನ್ನು ತಾವು ದಾವಾ ಹೂಡುವ ಸಮಯದಲ್ಲಿ ಪ್ರಶ್ನೆ ಮಾಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಾಯುವವರೆಗೂ ಅವರೇ ನನ್ನ ತವರುಮನೆಯ ಕುಟುಂಬದ ಕರ್ತ ಆಗಿದ್ದರು ಎಂದರೆ ಸರಿ. ದಿಃ03.09.1997ರಲ್ಲಿ ನೊಂದಾಯಿತ ವಿಲ್ ಮೂಲಕ ದಾವಾ ಆಸ್ತಿಗಳನ್ನು 5ನೇ ವಾದಿ ಮತ್ತು 1ನೇ ಪ್ರತಿವಾದಿಗೆ ಹೆಸರಿಗೆ ವಿಲ್ ಮಾಡಿ ಮರಣ ಹೊಂದಿದ್ದಾರೆ ಎಂದರೆ ಸರಿ. ದಿಃ29.09.1997ರಂದು ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ 5ನೇ ವಾದಿ ಮತ್ತು 1ನೇ ಪ್ರತಿವಾದಿ ಹೆಸರಿಗೆ ವಿಭಾಗ ಪತ್ರದ ಮೂಲಕ ದಾವಾ ಆಸ್ತಿಗಳನ್ನು ನನ್ನ ತಂದೆ ಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದು ಮನೆಯನ್ನು ಮಾತ್ರ ಕೊಟ್ಟಿದ್ದಾರೆ ಆದರೆ ಜಮೀನನ್ನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ವಿಭಾಗ ಪತ್ರದಂತೆ ದಾವಾ ಆಸ್ತಿಗಳು 5ನೇ ವಾದಿ ಮತ್ತು 1ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿವೆ ಎಂದರೆ ಸಾಕ್ಷಿ 5ನೇ ವಾದಿಗೆ ಖಾಲಿ ನಿವೇಶನ ಒಂದನ್ನು ಹೊರತುಪಡಿಸಿ ಯಾವುದೇ ಜಮೀನು ಅವರ ಭಾಗಕ್ಕೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಬದುಕಿದ್ದಾಗ ದಾವಾ ಆಸ್ತಿಗಳನ್ನು ವಿಭಾಗ ಪತ್ರದ ಮೂಲಕ 5ನೇ ವಾದಿ ಮತ್ತು 1ನೇ ಪ್ರತಿವಾದಿಗೆ ವಿಭಾಗ ಮಾಡಿಕೊಟ್ಟಿದ್ದು ಸದರಿ ವಿಭಾಗ ಪತ್ರವನ್ನು ನಾನಾಗಲೀ ಇನ್ನುಳಿದ ವಾದಿಯರಾಗಲೀ ಸಂಬಂಧಪಟ್ಟ ಕಂದಾಯ ಪ್ರಾಧಿಕಾರದ ಮುಂದೆಯಾಗಲೀ ಅಥವಾ ಸಿವಿಲ್ ನ್ಯಾಯಾಲಯದ ಮುಂದೆಯಾಗಲೀ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ದಿಃ02.05.1988ರಂದು ನನ್ನ ತಂದೆ ತಮ್ಮದೇ ಗ್ರಾಮದ ವಾಸಿ ರಾಮೇಗೌಡರಿಂದ ದಾವಾ ಐಟಂ 1ನೇ ಸ್ವತ್ತಾದ ಸರ್ವೆ ನಂಬರ್.68/7ರ ವಿಸ್ತೀರ್ಣ 1 ಎಕರೆ 31 ಗುಂಟೆ ಪೈಕಿ 36 ಗುಂಟೆ ಜಮೀನನ್ನು ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ14.05.1987ರಂದು 1ನೇ ಪ್ರತಿವಾದಿಯು ಸರ್ವೆ ನಂಬರ್.68/7ರಲ್ಲಿ 36 ಗುಂಟೆಯನ್ನು ಅದೇ ರಾಮೇಗೌಡರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

2. ನನ್ನ ಹೆಸರಿಗೆ ಬೆಂಗಳೂರಿನ ಕಾಳಿದಾಸ ಲೇಔಟ್, ಶ್ರೀನಗರ, ವಾರ್ಡ್ ನಂಬರ್ 53ರಲ್ಲಿ ಖಾತಾ ನಂಬರ್ 56, ಹೊಸ ನಂಬರ್ 22ರಲ್ಲಿ 16 ಮನೆಗಳು ಇವೆ ಎಂದರೆ ಸಾಕ್ಷಿ, 10 ಮನೆಗಳು ಇವೆ ಎನ್ನುತ್ತಾರೆ. ಸದರಿ 10 ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದು, ನನ್ನ, ನನ್ನ ಸಹೋದರ ಬೋರೇಗೌಡ, ತಂಗಿ ಸಾಕಮ್ಮರವರ ಹೆಸರಿಗೆ ಖಾತೆ ಇರುವ 10 ಮನೆಗಳನ್ನು ನನ್ನ ತಂದೆ ನಮಗೆ ಕೊಟ್ಟಂತಹ ಆಸ್ತಿಗಳು ಎನ್ನುತ್ತಾರೆ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಯಾವ ಉದ್ದೇಶಕ್ಕೆ ಸೇರಿಸಿಲ್ಲ ಎಂದರೆ ಸಾಕ್ಷಿ ನಾವು ನಮ್ಮ ತಾತನ ಆಸ್ತಿಯಲ್ಲಿ ಭಾಗ ಕೇಳುತ್ತಿದೇವೆ ಹಾಗಾಗಿ ಸೇರಿಸಿಲ್ಲ ಎನ್ನುತ್ತಾರೆ. ತಮ್ಮ ಹೆಸರಿಗೆ ಖಾತೆ ಇರುವ ಆಸ್ತಿಗಳನ್ನು  ಹೊರತುಪಡಿಸಿ ಪ್ರತಿವಾದಿಯರ ಹೆಸರಿಗೆ ಇರುವ ಆಸ್ತಿಗಳನ್ನು ಲಪಟಾಯಿಸಬೇಕು ಎಂಬ ಉದ್ದೇಶದಿಂದ ತಮ್ಮ ಹೆಸರಿನಲ್ಲಿ

ಇರುವ ಆಸ್ತಿಗಳನ್ನು ಮರೆಮಾಚಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಬದುಕಿರುವವರೆಗೂ ದಾವಾ ಆಸ್ತಿಗಳಲ್ಲಿ ಭಾಗಾಂಶದ ಬಗ್ಗೆ ತಕರಾರು ತೆಗೆದಿಲ್ಲ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗಲೇ ನಮ್ಮ ಕುಟುಂಬದ ವಾಲ್ಲ ಆಸ್ತಿಗಳನ್ನು ತಮ್ಮ ಮಕ್ಕಳಿಗೆ ಸಮವಾಗಿ ಹಂಚಿಕೊಟ್ಟಿದ್ದರಿಂದ ಅವರು ಬದುಕಿದ್ದಾಗ ಯಾವುದೇ ವಿಭಾಗದ ತಕರಾರು ತೆಗೆದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ತಮ್ಮ ಮತ್ತು ತಮ್ಮ ಸಹೋದರ ಮತ್ತು ಸಹೋದರಿಯರ ಹೆಸರಿಗೆ ಬೆಂಗಳೂರಿನಲ್ಲಿ ಇರುವ ಮನೆಗಳು ಹೆಚ್ಚು ಬೆಲೆ ಬಾಳುತ್ತವೆ ಎಂದರೆ ಸರಿ. ಬೆಂಗಳೂರಿನಲ್ಲಿ ಇರುವ ಒಂದಷ್ಟು ಮನೆಗಳಲ್ಲಿ ನಾವು ವಾಸ ಇದ್ದು ಇನ್ನಷ್ಟು ಮನೆಗಳನ್ನು ಬಾಡಿಗೆಗೆ ನೀಡಿ ಬಾಡಿಗೆ ಹಣ ಪಡೆಯುತ್ತಿದ್ದೇವೆ ಎಂದರೆ ಸಾಕ್ಷಿ ನನ್ನ ತಾಯಿ ಮತ್ತು ಸಹೋದರನಿಗೆ ಕೊಡುತ್ತಿದ್ದೇವೆ ಎನ್ನುತ್ತಾರೆ. ಬೆಂಗಳೂರಿನಲ್ಲಿರುವ ಮನೆಗಳನ್ನು ತಮಗೆ ತಮ್ಮ ತಂದೆ ಯಾವಾಗ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ 2015ರಲ್ಲಿ ಮರಣ ಹೊಂದಿದ್ದು ಮರಣ ಹೊಂದುವ 1 ವರ್ಷ ಪೂರ್ವದಲ್ಲಿ ವಿಲ್ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ತಮ್ಮ ಹೆಸರಿಗೆ ವಿಲ್ ಮಾಡಿದ ಸಂದರ್ಭದಲ್ಲಿ ತಮ್ಮ ತಂದೆ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ತಂದೆ ಸಾಯುವ ಕಾಲಕ್ಕೆ ಅವರಿಗೆ ಕ್ಯಾನ್ಸರ್ ರೋಗ ಬಂದು ಎಷ್ಟು ವರ್ಷ ಆಗಿತ್ತು ಎಂದರೆ ಸಾಕ್ಷಿ ಅವರು ಅನಾರೋಗ್ಯದಿಂದ ಬಳಲುತ್ತಿದ್ದಾಗ ಅವರನ್ನು ಆಸ್ಪತ್ರೆಗೆ ತೋರಿಸಿದಾಗಲೇ ಅವರಿಗೆ ಕ್ಯಾನ್ಸರ್ ಇದೆ ಎಂದು ಗೊತ್ತಾಗಿ ಸದರಿಯವರಿಗೆ 3 ತಿಂಗಳ ನಂತರ ಆಪರೇಷನ್ ಮಾಡಿಸಿ 3 ತಿಂಗಳ ನಂತರ 2 ವರ್ಷ ಬದುಕಿದ್ದರು ಎನ್ನುತ್ತಾರೆ. ನನ್ನ ತಂದೆ ಕ್ಯಾನ್ಸರ್ ನಿಂದ ಬಳಲುತ್ತಿದ್ದಾಗಲೇ ಎಲ್ಲಿ ನಮಗೆ ಆಸ್ತಿಗಳು ಸಿಗುವುದಿಲ್ಲವೋ ಎಂದು ತಿಳಿದು ನಾನು ಮತ್ತು ಇನ್ನುಳಿದ ಸಹೋದರ ಸಹೋದರಿ ಸೇರಿ ಬೆಂಗಳೂರಿನ ಮನೆಗಳನ್ನು ನನ್ನ ತಂದೆಗೆ ಒತ್ತಾಯ ಮಾಡಿ ವಿಲ್ ಬರೆಸಿಕೊಂಡಿದ್ದೇವೆ

ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಿತಾವಧಿಯಲ್ಲೇ ಆಸ್ತಿಗಳನ್ನು ತಮಗೆ ಮತ್ತು 1ನೇ ಪ್ರತಿವಾದಿಗೆ ವಿಭಾಗ ಮಾಡಿಕೊಟ್ಟಿದ್ದು ದಾವಾ ಆಸ್ತಿಗಳಲ್ಲಿ ಭಾಗ ಕೇಳುವ ಯಾವ ಹಕ್ಕೂ ಸಹ ನನಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರರ ಮತ್ತು ನನ್ನ ತಂಗಿಯ ಹೆಸರಿಗೆ ಇರುವ ಬೆಂಗಳೂರಿನಲ್ಲಿರುವ ಮನೆಗಳನ್ನು ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ನಮ್ಮ ಹೆಸರಿಗೆ ಇರುವ ಮನೆಗಳನ್ನು ನನ್ನ ತಂದೆ ವಿಲ್ ಮೂಲಕ ತಮಗೆ ಕೊಟ್ಟಿರುತ್ತಾರೆಂಬ ವಿಚಾರವನ್ನು ದಾವಾ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ.

**ಮರು ವಿಚಾರಣೆ ಃ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ.